# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.1542/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಕುರಕುಂಟಾ ಪೊಲೀಸ್ ಠಾಣೆ.

-ಃಃ ವಿರುದ್ಧ ಃಃ-

ಆರೋಪಿ ನಂ.1) ರಾಘವೇಂದ್ರ ತಂದೆ ಶಿವಯ್ಯಾ ಕಲಾಲ್,
ವಃ 23 ವರ್ಷ, ಉಃ ಕೂಲಿ ಕೆಲಸ,

2) ಮಲ್ಲಪ್ಪ ತಂದೆ ಆಶಪ್ಪ ಗೊಲ್ಲಾ,
ವಃ 48 ವರ್ಷ, ಉಃ ಕೂಲಿ ಕೆಲಸ,
ಇಬ್ಬರೂ ಸಾಃ ಕುರಕುಂಟಾ ಗ್ರಾಮ.

----

## ದೋ ಷಾ ರೋ ಪ ಣೆ

ನಾನು ಶ್ರೀ ಸುನೀಲ್. ಎಸ್. ತಳವಾರ, ಬಿ.ಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತರಾದ ನೀವು ದಿನಾಂಕ 23-05-2022 ರಂದು ಸಾಯಂಕಾಲ 4.20 ಗಂಟೆ ಸುಮಾರಿಗೆ ಕುರಕುಂಟಾ ಪೊಲೀಸ್ ಠಾಣಾ ಹದ್ದಿಯಲ್ಲಿರುವ ಕುರಕುಂಟಾ ಗ್ರಾಮದ ರೇಲ್ವೆ ಕ್ರಾಸ್ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ನೀವು ಅಕ್ರಮವಾಗಿ ಕಲಬೆರಕೆ ಸೇಂದಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾಗ, ಚಾಸಾ-1, 4 ರಿಂದ 6 ನೇದ್ದವರು ಕೂಡಿಕೊಂಡು, ಚಾಸಾ-2 ಮತ್ತು 3 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಲು ಬಂದಾಗ, ನೀವು ಪೊಲೀಸರನ್ನು ನೋಡಿ ಓಡಿ ಹೋಗಿದ್ದು, ನಂತರ ಸ್ಥಳ ಪರಿಶೀಲನೆ ಮಾಡಿದಾಗ, 1 ಲೀಟರಿನ 50 ಪಾಕೆಟ್‌ಗಳು, ಒಂದು ಪ್ಲಾಸ್ಟಿಕ್ ಬ್ಯಾರೆಲ್, ಎರಡು ಜಗ್ಗುಗಳು ಜಪ್ತಿಪಡಿಸಿಕೊಂಡಿದ್ದು, ಅಲ್ಲದೇ ಸದರಿ ಕಲಬೆರಕೆ ಸೇಂದಿ ಸೇವನೆಯಿಂದ ಮಾನವ ಜೀವಕ್ಕೆ ಹಾನಿಯಾಗುತ್ತದೆಂದು ಗೊತ್ತಿದ್ದರೂ ಸಹ ಕಲಬೆರಕೆ ಸೇಂದಿ ಮಾರಾಟ ಮಾಡಿದ್ದರಿಂದ, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ಹಾಗೂ ಭಾ.ದಂ.ಸಂ. 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

[signature] 01/09/23

ದಿನಾಂಕ 01-09-2023

ಪ್ರ.ದ.ನ್ಯಾದಂ. ಸೇಡಂ.